**ದಿನಾಂಕಃ 08.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು**

**ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆ : ಶ್ರೀ ಟಿ.ಟಿ. ವಾದಿ ಪರ ವಕೀಲರಿಂದ**

ನಾಯಕನಹಟ್ಟಿ ಪಟ್ಟಣ ಪಂಚಾಯಿತಿಯವರು ನೀಡಿದ ನಮೂನೆ-3 ಗಣಕೀಕೃತ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ.6 ಅಂತ ಗುರುತಿಸಲಾಯಿತು.

ನಾಲ್ಕು ಕಂದಾಯ ರಸೀದಿಗಳನ್ನು ಹಾಜರು ಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ.7 ರಿಂದ ನಿಪಿ.10 ಅಂತ ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಟಿ.ಆರ್., ಪ್ರತಿವಾದಿ ಪರ ವಕೀಲರಿಂದ**

ನಿಪಿ.1 ರಲ್ಲಿರುವ ಚಕ್ಕುಬಂದಿಗೂ ನಿಪಿ.6 ರಲ್ಲಿರುವ ಚಕ್ಕುಬಂದಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಸಾಕ್ಷಿಯ ಮುಂದುವರಿದು ವ್ಯತ್ಯಾಸ ಇರುವುದನ್ನು ಪಟ್ಟಣ ಪಂಚಾಯಿತಿಯಲ್ಲಿ ತಿದ್ದುಪಡಿ ಮಾಡಿಕೊಡುತ್ತೇವೆ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.3 ರಲ್ಲಿರುವ ಚಕ್ಕುಬಂದಿಗೂ ನಿಪಿ.6 ರಲ್ಲಿರುವ ಚಕ್ಕುಬಂದಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಸಾಕ್ಷಿಯ ಮುಂದುವರಿದು ವ್ಯತ್ಯಾಸ ಇರುವುದನ್ನು ಪಟ್ಟಣ ಪಂಚಾಯಿತಿಯಲ್ಲಿ ತಿದ್ದುಪಡಿ ಮಾಡಿಕೊಡುತ್ತೇವೆ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ.6 ರಲ್ಲಿ ಹಳೆ ಖಾತೆ ನಂಬರನ್ನು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯ ತಿದ್ದು ಪಡಿ ಮಾಡುವಾಗ ಹಳೆ ಖಾತೆ ನಂಬರ್ ನಮೂದಿಸಿ ಕೊಡುತ್ತೇವೆ ಎಂದು ಪಂಚಾತಿಯವರು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಪಂಚಾಯಿತಿಯವರು ನಿಪಿ.6 ಅನ್ನು ತಿದ್ದುಪಡಿ ಮಾಡಿಕೊಡುತ್ತೇವೆ ಎಂದು ಹೇಳಿರುತ್ತಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ವಿನಾ ಕಾರ ಪ್ರತಿವಾದಿಗೆ ತೊಂದಗೆ ಕೊಡುವ ಸಲುವಾಗಿ ನಿಪಿ.6 ಅನ್ನು ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ಹಾಜುರ ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.